

# ಕುದುರೆ ಹಿಡಿದು ಕಾಲ್ನಡಿಗೆ ಹೊರಟು...

ಮೊನ್ನೆಯಷ್ಟೇ ಎಎಫ್‌ಪಿ ಸುದ್ದಿ ಸಂಸ್ಥೆಯು ಹೆಕ್ಕಿತಂದ ಚಿತ್ರವೊಂದು ಪ್ರಪಂಚದ ಗಮನಸೆಳೆಯಿತು. ರಸ್ತೆಯಂಚಿನಲ್ಲಿ ಯುವತಿಯೊಬ್ಬಳು ಎರಡು ಕುದುರೆಗಳನ್ನು ಹಿಡಿದುಕೊಂಡು ಹೊರಟ ದೃಶ್ಯವದು. ಆ ಕುದುರೆಗಳ ನೆರಳಿನಲ್ಲಿ ನಾಯಿಯೊಂದು ಹೆಜ್ಜೆ ಹಾಕುತ್ತಿತ್ತು. ಅದರ ಬೆನ್ನಮೇಲೆ ಪುಟ್ಟದೊಂದು ಬ್ಯಾಗ್ ಬೇರೆ ಇತ್ತು.

ಯಾರೀ ಯುವತಿ? ಕುದುರೆಗಳು ಮತ್ತು ನಾಯಿಯೊಂದಿಗೆ ಆಕೆ ಹೊರಟಿದ್ದಾದರೂ ಎಲ್ಲಿಗೆ? ಈ ಪ್ರಶ್ನೆಗಳನ್ನು ಹಾಕಿಕೊಂಡು ತಲೆ ಕೆರೆದುಕೊಂಡವರಿಗೆ ಲೆಕ್ಕವಿಲ್ಲ.

ಆ ಯುವತಿಗೆ ಈಗಷ್ಟೇ 27ರ ಹರೆಯ. ಸ್ವಿಟ್ಜರ್ಲೆಂಡ್‌ನ ಪ್ರಜೆ. ಕಳೆದ ಎಂಟು ತಿಂಗಳಿನಿಂದಲೂ ಪಾದಯಾತ್ರೆ ಮಾಡುತ್ತಲೇ ಇದ್ದಾಳೆ. ನಮ್ಮ ದೇಶದಲ್ಲೂ ಸಾವಿರಾರು ಮಂದಿ ಇವಳಂತೆ ಪಾದಯಾತ್ರೆ ಮಾಡುತ್ತಲೇ ಇರುತ್ತಾರೆ. ವ್ಯತ್ಯಾಸ ಏನೆಂದರೆ, ನಮ್ಮ ದೇಶದ ಪಾದಯಾತ್ರಿಗಳು ದೇವರ ದರ್ಶನಕ್ಕೆ ಹೊರಟರೆ, ಈಕೆ ದೇಶಗಳನ್ನು ಸುತ್ತಲು ಕಾಲ್ನಡಿಗೆಯ ಹಾದಿ ಹಿಡಿದಿದ್ದಾಳೆ. ಈಗಾಗಲೇ ಐದು ದೇಶಗಳನ್ನು ಸುತ್ತಿರುವ ಆ ಯುವತಿಯೇ ಮನಿಶಾ ಬರ್ಗರ್.

ಕುದುರೆಗಳಿಗೆ ತರಬೇತಿ ನೀಡುವುದು ಅವಳ ಕಾಯಕ. ಪ್ರವಾಸವೆಂದರೆ ಪಂಚಪ್ರಾಣ. ಚಿಕ್ಕವಳಿದ್ದಾಗಿನಿಂದ ಆಕೆ ಸುತ್ತಿದ ಊರುಗಳಿಗೆ ಲೆಕ್ಕವಿಲ್ಲ. ಆದರೆ, ಕಳೆದ ಸೆಪ್ಟೆಂಬರ್‌ನಲ್ಲಿ ಮನಿಶಾ ಒಂದು ನಿರ್ಧಾರಕ್ಕೆ ಬಂದಳು. ಅದೆಂದರೆ ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ವಿಮಾನ ಇಲ್ಲವೆ ಕಾರನ್ನು ಇನ್ನುಮುಂದೆ ಪ್ರವಾಸ ಮಾಡಲು ಬಳಸಬಾರದು ಎಂದು. ಯುರೋಪಿನ ದೇಶಗಳನ್ನು ಸುತ್ತುವ ಉಮೇದಿ ಹೆಚ್ಚಾದಾಗ ಆಕೆ ಎರಡು ಕುದುರೆಗಳನ್ನು ದತ್ತು ಪಡೆದಳು. ಹೇಗೂ ನಾಯಿ 'ಅಕು' ಜತೆಗಿತ್ತು. ಪ್ರವಾಸಕ್ಕೆ ಬೇಕಾದ ವಸ್ತುಗಳನ್ನು ಒಂದೆರಡು ಬ್ಯಾಗ್‌ಗಳಲ್ಲಿ ತುಂಬಿಕೊಂಡ ಮನಿಶಾ, ನಾಯಿ–ಕುದುರೆಗಳನ್ನು ಕರೆದುಕೊಂಡು ಪಾದಯಾತ್ರೆ ಹೊರಟೇಬಿಟ್ಟಳು.

ಈಗಾಗಲೇ ಇಟಲಿ, ಸ್ಲೊವೇನಿಯಾ, ಕ್ರೊವೇಶಿಯಾ, ಸರ್ಬಿಯಾ ದೇಶಗಳನ್ನು ಸುತ್ತಿರುವ ಆಕೆ, ಈಗ ತನ್ನ ತವರಿಗೆ ಮರಳುವ ಹಾದಿಯಲ್ಲಿದ್ದಾಳೆ. 'ಪ್ರವಾಸ ನನ್ನ ನೆಚ್ಚಿನ ಹವ್ಯಾಸ. ಆದರೆ, ಜೀವನಪರ್ಯಂತ ವಿಮಾನದಲ್ಲಿ ಪ್ರಯಾಣ ಮಾಡದಿರಲು ನಿರ್ಧರಿಸಿರುವೆ. ಕಳೆದ ಎಂಟು ತಿಂಗಳ ಪಾದಯಾತ್ರೆಯಲ್ಲಿ ಈ ನಿರ್ಧಾರ ಇನ್ನೂ ಗಟ್ಟಿಯಾಗಿದೆ. ಪರಿಸರವನ್ನು ಮಾಲಿನ್ಯ ಮುಕ್ತಗೊಳಿಸುವುದಕ್ಕೆ, ಇಂಗಾಲದ ಹೆಜ್ಜೆ ಗುರುತುಗಳನ್ನು ಕಡಿಮೆ ಮಾಡುವುದಕ್ಕೆ ಇದು ನನ್ನ ಅಲ್ಪ ಕಾಣಿಕೆ' ಎಂದು ಆಕೆ ಹೇಳುತ್ತಾಳೆ.

'ಯುರೋಪಿನ ವಿವಿಧ ಭಾಗಗಳಲ್ಲಿ ಸಂಚರಿಸಲು, ಅಲ್ಲಿನ ಜನರನ್ನು ಭೇಟಿ ಮಾಡಲು ನನ್ನ ಕುದುರೆಗಳು ತುಂಬಾ ಸಹಾಯ ಮಾಡಿವೆ. ಆದರೆ, ದಾರಿಯಲ್ಲಿ ಸಿಗುವ ಜನ ಒಳ್ಳೆಯವರೇ ಆದರೂ ಅವರಿಗೆ ನನ್ನ ಪಯಣದ ಕುರಿತು ಕೆಟ್ಟ ಕುತೂಹಲ. ನಾಚಿಕೆ ಸ್ವಭಾವದ ನಾನು ಅವರ ಕಾಟ ತಪ್ಪಿಸಿಕೊಳ್ಳಲು ಕಾಡಿನಲ್ಲಿ ವಾಸ ಮಾಡಿದ್ದಿದೆ. ಹೀಗಾಗಿ ನಾನೊಬ್ಬಳು ಕಾಡುಮನುಷ್ಯಳು' ಎಂದು ಹೇಳುತ್ತಾ ಮನಿಶಾ ನಗು ಬೀರುತ್ತಾಳೆ.

'ನಾನೊಬ್ಬ ಮಹಿಳೆ. ದಾರಿಯಲ್ಲಿ ಎದುರಾಗುವ ಎಲ್ಲ ಸವಾಲುಗಳ ಅರಿವಿದ್ದೂ ನಾನು ಕಾಲ್ನಡಿಗೆಯ ಹಾದಿ ಹಿಡಿದಿರುವೆ. ಇನ್ಮುಂದೆ ನನ್ನ ಪ್ರಯಾಣ ಇದೇ ರೀತಿ ಇರಲಿದೆ' ಎನ್ನುತ್ತಾಳೆ. ಹುಲ್ಲುಗಾವಲನ್ನು ನೋಡಿ ಕುದುರೆಗಳನ್ನು ಮೇಯಲು ಬಿಡುವ ಆಕೆ, ತನಗೆ ಮತ್ತು ಅಕುಗೆ ಬ್ಯಾಕ್ ಪ್ಯಾಕ್‌ನಲ್ಲಿ ಸಿದ್ಧ ಆಹಾರ ಹೊತ್ತೊಯ್ಯುತ್ತಾಳೆ. ಊಟಕ್ಕೆ ಇಂತಹದ್ದೇ ಎನ್ನುವ ಬೇಡಿಕೆ ನನಗಿಲ್ಲ. ಹಳ್ಳಿಗಳಲ್ಲಿ ಸಿಗುವ ಆಹಾರವನ್ನೇ ಉಂಡು, ಮುಂದೆ ಸಾಗುತ್ತಿರುವೆ ಎನ್ನುತ್ತಾಳೆ. ದಾರಿಯಲ್ಲಿ ಸಿಗುವ ಊರಿನಲ್ಲಿ ರಾತ್ರಿ ತಂಗುತ್ತಾಳೆ. ಜತೆಯಲ್ಲಿ ಕುದುರೆಗಳು ಇದ್ದರೂ ಅವುಗಳ ಸವಾರಿ ಮಾಡಿಲ್ಲ. ನಡೆದುಕೊಂಡು ಹೋಗುವ ವ್ರತಕ್ಕೆ ಒಂದಿನಿತೂ ಭಂಗ ತಂದುಕೊಂಡಿಲ್ಲ.

'ನನ್ನ ಬೇಡಿಕೆಗಳು ತೀರಾ ಅತ್ಯಲ್ಪ. ಹೀಗಾಗಿ ನನ್ನದೆಲ್ಲವನ್ನೂ ಊರಿನಲ್ಲೇ ಬಿಟ್ಟು ಬಂದಿದ್ದೇನೆ. ಎಲ್ಲ ಭಾರವನ್ನು ಕಳೆದುಕೊಂಡು ಹಗುರವಾಗಿ ಹೆಜ್ಜೆ ಹಾಕುತ್ತಿದ್ದೇನೆ. ನನ್ನ ಈ ಯಾನ ನನಗೆ ಅಪಾರವಾದ ನೆಮ್ಮದಿ ನೀಡಿದೆ' ಎಂದು ಆಕೆ ಹೆಮ್ಮೆಯಿಂದ ಹೇಳುತ್ತಾಳೆ. ಯುರೋಪಿನ ನೂರಾರು ಹಳ್ಳಿಗಳನ್ನು ಸುತ್ತಿರುವ ಮನಿಶಾ, ಅಲ್ಲಿನ ಆಚಾರ–ವಿಚಾರ, ಸಂಸ್ಕೃತಿ, ಕೃಷಿ ಕುರಿತು ಸಾಕಷ್ಟು ಮಾಹಿತಿಯನ್ನೂ ಹೊಂದಿದ್ದಾಳೆ.

ಜತೆಯಲ್ಲಿ ಕುದುರೆಗಳಿದ್ದರೂ ಸವಾರಿಗೆ ಅವುಗಳನ್ನು ಬಳಸದೆ ನಡೆದುಕೊಂಡೇ ಹೋಗುವುದೇಕೆ? ಹಲವು ದಾರಿಹೋಕರು ಆಕೆಯ ಮುಂದೆ ಈ ಪ್ರಶ್ನೆ ಇಟ್ಟಿದ್ದಾರೆ. 'ರಸ್ತೆಗಳು ಸವಾರಿಗೆ ಯೋಗ್ಯವಾಗಿಲ್ಲ. ಅಲ್ಲದೆ, ನಡೆದುಹೋಗುವ ಆನಂದವೇ ಬೇರೆ. ನನ್ನ ಬ್ಯಾಗ್‌ಗಳನ್ನು ಅವುಗಳು ಹೊತ್ತು ಬರುತ್ತಿವೆಯಲ್ಲ, ಅಷ್ಟು ಸಾಕು' ಎಂದು ಉತ್ತರಿಸುತ್ತಾಳೆ. ಏಕಾಂಗಿತನದ ಬೇಸರವನ್ನು ಕಳೆಯಲು ಕುದುರೆ–ನಾಯಿಯ ಸಾಂಗತ್ಯ ಆಕೆಯ ನೆರವಿಗೆ ಬಂದಿದೆಯಂತೆ. ಎಂಟು ತಿಂಗಳು ಎಂದರೆ ಭರ್ತಿ 240 ದಿನಗಳು. ಬಯಲನ್ನೇ ಆಲಯ ಮಾಡಿಕೊಂಡು ಲೋಕ ಸಂಚಾರ ಮಾಡುತ್ತಾ, ಜನರನ್ನು ಭೇಟಿ ಮಾಡುತ್ತಾ, ಕಾಡಿನ ರಾತ್ರಿ ಕಳೆಯುತ್ತಾ ಹೊರಟ ಈ ಹುಡುಗಿಯ ಸಾಹಸ ಎಲ್ಲರೂ ಮೆಚ್ಚುವಂಥದ್ದು, ಮಾತ್ರವಲ್ಲ; ಧೈರ್ಯದಿಂದ ಮುನ್ನುಗ್ಗಲು ಯುವಪೀಳಿಗೆಗೆ ಪ್ರೇರಣೆ ನೀಡುವಂಥದ್ದು, ಅಲ್ಲವೇ?

■ ಪ್ರವೀಣ ಕುಲಕರ್ಣಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65